# ನಾಂದಿಪದ


## ಕಾವ್ಯದ ಜೊತೆಜೊತೆಗೆ

**ದೇಶ** ವಿದೇಶಗಳ ಅತ್ಯುತ್ತಮ ಲೇಖಕರನ್ನು ಕನ್ನಡ ಓದುಗರಿಗೆ ಪರಿಚಯಿಸುವ ಕೆಲಸವನ್ನು 'ಮಯೂರ' ನಿರಂತರವಾಗಿ ಮಾಡುತ್ತಾ ಬಂದಿದೆ. ಕನ್ನಡದ ಸಾಹಿತಿಗಳ ಜೊತೆಗೆ ಸೋದರ ಭಾಷೆಗಳ ಬರಹಗಾರರ ಸಂದರ್ಶನಗಳನ್ನು ಪ್ರಕಟಿಸುವ ಮೂಲಕ ಸಹೃದಯರ ಅನುಭವ ಜಗತ್ತಿಗೆ ಹೊಸ ಭಾವ-ಬಣ್ಣಗಳನ್ನು ಕೂಡಿಸುವ ಕೆಲಸವನ್ನೂ ಮಾಡುತ್ತಿದೆ. ಈ ಸಾಲಿಗೆ ಹೊಸ ಸೇರ್ಪಡೆ ಮಲಯಾಳಂ ಕವಿ ಕೆ. ಸಚ್ಚಿದಾನಂದನ್ ಅವರ ಸಂದರ್ಶನ. ಭಾರತದ ಪ್ರಮುಖ ಕವಿಗಳಲ್ಲೊಬ್ಬರಾದ ಸಚ್ಚಿದಾನಂದನ್ ಕಾವ್ಯದ ಮೂಲಕ ನಡೆಸಿರುವ ಲೋಕಸಂವಾದ ಎಲ್ಲ ದೇಶ-ಕಾಲಗಳ ಸಹೃದಯರೂ ಗಮನಿಸಬೇಕಾದಂತಹದ್ದು. 'ಕಾವ್ಯ ಮನುಷ್ಯ ಕುಲದ ತಾಯಿನುಡಿ' ಎನ್ನುವ ಅವರ ಮಾತು ಕಾವ್ಯದ ಅನನ್ಯತೆಯ ಕುರಿತ ಹೇಳಿಕೆಯಾದರೂ, ಮನುಷ್ಯನ ಬದುಕಿನ ಚೆಲುವನ್ನು ಹೆಚ್ಚಿಸಬಹುದಾದ ಎಲ್ಲ ಸಂಗತಿಗಳೂ ಆತ್ಯಂತಿಕ ಸ್ಥಿತಿಯಲ್ಲಿ ಕಾವ್ಯವೇ ಆಗಿರುತ್ತವೆ ಎನ್ನುವ ಸತ್ಯವನ್ನು ಮನಗಾಣಿಸುವಂತಿದೆ. ಕವಯಿತ್ರಿ ಜ.ನಾ. ತೇಜಶ್ರೀ ಅವರು 'ಮಯೂರ'ಕ್ಕಾಗಿ ಮಾಡಿಕೊಟ್ಟಿರುವ ಈ ಸಂದರ್ಶನವೇ ಒಂದು ಖಂಡಕಾವ್ಯದಂತಿದೆ ಹಾಗೂ ಸಚ್ಚಿದಾನಂದನ್ ಹೇಗೆ ಕನ್ನಡದ ಕವಿಯೂ ಭಾರತದ ಕವಿಯೂ ಹೌದು ಎನ್ನುವುದನ್ನು ಹೇಳುವಂತಿದೆ. ಕಾವ್ಯಸೂಕ್ಷ್ಮಗಳನ್ನು ಅರಿಯಲು, ಕಾವ್ಯದ ಮೂಲಕ ಸಮಕಾಲೀನ ಸಂದರ್ಭದ ಬಿಕ್ಕಟ್ಟುಗಳನ್ನು ತಿಳಿಯಲು ಅಗತ್ಯವಾದ ಹೊಳಹುಗಳೂ ಈ ಮಾತುಕತೆಯಲ್ಲಿವೆ.

ತಮಿಳು ಹಾಗೂ ಕನ್ನಡ ಸಂಸ್ಕೃತಿಗಳ ನಡುವೆ ಸಂಪರ್ಕ ಸೇತುವಿನಂತಿದ್ದ ಲೇಖಕ ಪರಂಜ್ಯೋತಿ ಅವರ ಸಾಹಿತ್ಯಿಕ ಸಾಧನೆಯನ್ನು ಪರಿಚಯಿಸುವ ಬರಹ ಈ ಸಂಚಿಕೆಯ ವಿಶೇಷಗಳಲ್ಲೊಂದು. ನೀಲಗಿರಿ ಸೀಮೆಯ ಈ ವಿಶಿಷ್ಟ ಬರಹಗಾರ ನಿಧನರಾಗಿ ಐದು ವರ್ಷಗಳು ತುಂಬುತ್ತಿರುವ ಸಂದರ್ಭದಲ್ಲಿ ಪ್ರಕಟಗೊಳ್ಳುತ್ತಿರುವ ರಹಮತ್ ತರೀಕೆರೆ ಅವರ ಈ ಬರಹ, ಕನ್ನಡ ಸಾಹಿತ್ಯಲೋಕ ಅಷ್ಟಾಗಿ ಗಮನಿಸದೆಹೋದ ಬರಹಗಾರನೊಬ್ಬನಿಗೆ ತಡವಾಗಿ ಸಲ್ಲುತ್ತಿರುವ ಗೌರವವಾಗಿದೆ.

ವೈವಿಧ್ಯದಿಂದ ಕೂಡಿರುವ ಕಥೆ, ಕವಿತೆ, ಲೇಖನಗಳಿಂದ ಕೂಡಿರುವ ಈ ಸಂಚಿಕೆ ಓದುಗರಿಗೆ ಇಷ್ಟವಾಗುವ ನಂಬಿಕೆ ನಮ್ಮದು.

**ಮಯೂರ ಬಳಗ**
editormy@mayura.co.in



ಕಲೆ: ಬಸವರಾಜ ಕಲೆಗಾರ